ಕರೆಯಬೇಕೋ? ದೇಶಪ್ರೇಮವೆಂದು ಕರೆಯಬೇಕೋ? ಈ ಎರಡರ ಆಚೆಗಿನ ಅವಳ ದಿಟ್ಟತನಕ್ಕೆ ನಮ್ಮ ಗೌರವ ಸಲ್ಲಬೇಕು. ನೂರ್‌ಗೆ ಸಿಗುವ ಕೆಲಸ ಗೂಢಚಾರಿಣಿಯದ್ದು. ಈಗಲೂ ನೂರ್‌ಳನ್ನು ಜಗತ್ತಿನ ಮಾದರಿ ಗೂಢಚಾರಿಣಿ ಎಂದು ಪರಿಗಣಿಸಲಾಗುತ್ತದೆಯಂತೆ! ಕೋಡ್ ಭಾಷೆಯನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದಾಗಲೀ, ಟ್ರಾನ್ಸ್‌ಮಿಷನ್ ಯಂತ್ರವನ್ನು ಚುರುಕಾಗಿ ಬಳಸುವುದರಲ್ಲಾಗಲೀ, ವೇಷ ಬದಲಿಸುವುದರಲ್ಲಾಗಲೀ, ಗಳಿಗೆ ಗಳಿಗೆಗೆ ಸ್ಥಳ ಬದಲಿಸುವುದರಲ್ಲಾಗಲೀ, ಈ ಎಲ್ಲದರಲ್ಲೂ ನೂರ್ ಅಪ್ರತಿಮಳಂತೆ. ಇವಳು ಜರ್ಮನರ ವಿರುದ್ಧ ಬ್ರಿಟಿಷರಿಗೆ ಕೊಡುತ್ತಿದ್ದ ವಿವರಗಳು ಬಹಳ ಉಪಯುಕ್ತವಾಗಿರುತ್ತಿದ್ದವು. ಹೀಗಾಗಿ ಜರ್ಮನರಿಗೆ ಇವಳನ್ನು ಹಿಡಿಯಲೇಬೇಕೆನ್ನುವ ಪರಿಸ್ಥಿತಿ ಒದಗಿತ್ತು. ಇವಳ ಎತ್ತರ, ಮೈಕಟ್ಟು, ಮೈಬಣ್ಣ ಈ ಎಲ್ಲಾ ವಿವರಗಳನ್ನೂ ಒಳಗೊಂಡ ಕರಪತ್ರಗಳನ್ನು ಜರ್ಮನರು ಎಲ್ಲಾ ರೈಲ್ವೇಸ್ಟೇಷನ್‌ಗಳಲ್ಲೂ ಅಂಟಿಸಿದ್ದರಂತೆ. ಅಷ್ಟು ತೀವ್ರವಾಗಿ ಇವಳನ್ನು ಅವರು ಹುಡುಕುತ್ತಿದ್ದರು. ಕೊನೆಗೆ ಇವಳನ್ನು ರೇನೀ ಗ್ಯಾರೀ ಎನ್ನುವ ಡಬಲ್ ಏಜೆಂಟ್ ಜರ್ಮನರಿಗೆ ಹಿಡಿದುಕೊಡುತ್ತಾಳೆ. ಇವಳನ್ನು ಹಿಡಿದವನು ಕರ್ಟಡ್ ಎನ್ನುವ ಅಧಿಕಾರಿ. ಇವಳನ್ನು ಸೆರೆಹಿಡಿಯುವುದು ಅದೆಷ್ಟು ಕಷ್ಟವಾಯಿತು ಎನ್ನುವುದನ್ನು ಅವನು ಹೇಳಿದ್ದಾನೆ. ಅವನ ಮಣಿಕೈಗೆ ರಕ್ತ ಬರುವಂತೆ ಕಚ್ಚುವುದರಿಂದ ಹಿಡಿದು ಎಲ್ಲಾ ತಪ್ಪಿಸಿಕೊಳ್ಳುವ ಪ್ರಯತ್ನಗಳನ್ನೂ ಇವಳು ಮಾಡುತ್ತಾಳೆ. ಕೊನೆಗೆ ಮಂಚದ ಮೇಲೆ ಹತ್ತಿನಿಂತು ತೀಕ್ಷ್ಣವಾಗಿ ಇವನನ್ನು ನೋಡುತ್ತಿದ್ದ ನೂರ್ ಅವನ ಕಣ್ಣಿಗೆ 'ಹೆಣ್ಣು ಹುಲಿ'ಯಂತೆ ಕಂಡಳಂತೆ. (ಅವನಿಗೆ ಇವಳು 'ಮೈಸೂರು ಹುಲಿ'ಯ ಮರಿ ಮರಿ ಮೊಮ್ಮಗಳೆನ್ನುವುದು ಖಂಡಿತ ಗೊತ್ತಿರಲಿಲ್ಲ). ಹಲವು ಜೈಲುಗಳಲ್ಲಿ ಇವಳು ಅನುಭವಿದಷ್ಟು ಹಿಂಸೆಯನ್ನು ಈ ತನಕ ಯಾವ ಮಹಿಳಾ ಕೈದಿಯೂ ಅನುಭವಿಸಲಾರಳು. ಯಾವುದೋ ಒಂದು ಜೈಲಿನಲ್ಲಿರುವಾಗ ಇವಳ ಎದುರಿಗಿನ ಕೋಣೆಯಲ್ಲಿ ಮೂವರು ಮಹಿಳಾ ಕೈದಿಗಳಿರುತ್ತಾರೆ. ಅವರಿಗೆ ನೂರ್ ಈ ಜೈಲಿನಲ್ಲಿದ್ದಾಳೆ ಎನ್ನುವುದೇ ಒಂದು ಸಂಭ್ರಮದ ಸಂಗತಿ. ನೂರ್ ಬಹಳ ಅಪಾಯಕಾರಿ ಕೈದಿಯಾದ್ದರಿಂದ ಅವಳನ್ನು ತಿಂಗಳಿಗೋ, ಎರಡು ತಿಂಗಳಿಗೋ ಮಾತ್ರ ಪ್ಯಾಸೇಜ್‌ನಲ್ಲಿ ಓಡಾಡಲು ಅವಕಾಶ ಮಾಡಿಕೊಡುತ್ತಿದ್ದರು. ಊಟದ ತಟ್ಟೆಗಳ ಕೆಳಗೆ ಸಂದೇಶಗಳನ್ನು ಬರೆಯುವ ಮೂಲಕ ಇವರ ನಡುವೆ ಸಂಪರ್ಕವೊಂದು ಸಾಧ್ಯವಾಗಿಬಿಡುತ್ತದೆ.

ಅವಳನ್ನು ಕೊನೆಯಲ್ಲಿ ಇರಿಸಿದ್ದು ಡಕಾವೋದ ಜೈಲಿನಲ್ಲಿ. ಆ ಜೈಲಿನಲ್ಲೇ ಒಂದು ದಿನ ಇವಳು ಮತ್ತು ಇತರ ಮೂವರನ್ನು ಕುರಿತಂತೆ ಫುಲ್ ಟ್ರೀಟ್‌ಮೆಂಟ್ ಕೊಡುವ ಆಜ್ಞೆ ಹೊರಡುತ್ತದೆ. ಪ್ರತಿಕ್ಷಣ ಹಿಂಸಿಸುತ್ತಲೇ ಕೊಲ್ಲುವ ಯಾತನೆಗೆ ಹೆಸರು 'ಫುಲ್ ಟ್ರೀಟ್‌ಮೆಂಟ್'. ಇವಳಿಗೆ ಆ ಟ್ರೀಟ್‌ಮೆಂಟ್ ಕೊಟ್ಟ ಅಧಿಕಾರಿಯ ಹೆಸರು ರೂಪರ್ಟ್. ಸೆಲ್‌ನಿಂದ ಅವಳನ್ನು ಹೊರಗೆ ತಂದಾಗ ಅವಳ ಮೈಯಿಡೀ ರಕ್ತ. ಅತ್ಯಾಚಾರ ನಡೆಸದೇ ಹೆಣ್ಣಿನ ಮಟ್ಟಿಗೆ ಅದು ಫುಲ್ ಟ್ರೀಟ್‌ಮೆಂಟ್ ಹೇಗಾದೀತು? ಅವಳ ಬಟ್ಟೆಗಳನ್ನೆಲ್ಲಾ ಬಿಚ್ಚಿ ಹೊಡೆದು, ಬಡಿದರೆ ಸುಮ್ಮನೆ ಸಹಿಸಿಕೊಂಡ ಸಂತೆ ನೂರ್. ರೂಪರ್ಟ್ ಹಿಂಬದಿಯಿಂದ ಪಿಸ್ತೂಲನ್ನು ಅವಳ ಹಣೆಯತ್ತ ಗುರಿಯಿಟ್ಟ. ಆ ಗಳಿಗೆಯಲ್ಲಿ ಅವಳ ಬಾಯಿಂದ ಬಂದ ಪದ 'ಲಿಬರ್ಟಿ'.

ನೂರ್ ತಾನು ಗೂಢಚಾರಿಣಿಯಾಗಿ ಸೇರಿದ್ದನ್ನು ಕುಟುಂಬದ ಯಾರಿಗೂ ಹೇಳಿರಲಿಲ್ಲ. ಹಾಗಾಗಿ ಕುಟುಂಬ ಒಂದಲ್ಲಾ ಒಂದು ದಿನ ನೂರ್ ಬಂದಾಳೆಂದು ಕಾಯುತ್ತಲೇ ಇತ್ತು ದಾರುಣ ಸತ್ಯ ತಿಳಿಯುವವರೆಗೆ.

ನೂರ್‌ಳ ಈ ಕಥನವೇ ಒಂದು ರೂಪಕ. 'ಪ್ರೀತಿಗೆ, ಶಾಂತಿಗೆ ಗೆಲುವಿರಲೆಂದು, ನಾಳಿನ ಬಾಗಿಲು ನಂದನವೆಂದು, ಎಲ್ಲರಿಗೊಳಿತನು ಬಯಸಲಿ ಕವನ'. ನೂರ್ ನಿಜದಲ್ಲಿ ಸೂಫಿ ಪಂಥದವಳಾಗಿ, ವಿಶ್ವಮಾನವ ತತ್ತ್ವವನ್ನು ಉಸಿರಾಡುವವಳಾಗಿ ಬಯಸಿದ್ದು ಇದನ್ನೇ. ಅವಕಾಶವಿದ್ದಿದ್ದರೆ ಅವಳು